## ಕವಿತೆ




**ಸತ್ಯಪ್ರಕಾಶ್ ರಾಮಯ್ಯ**

ಕಲೆ: ಎಸ್.ವಿ. ಹೂಗಾರ್




# ಬಾಡಿಗೆ ಕುದುರೆ

ಶತಮಾನಗಳ ಗಾಯವಿನ್ನೂ ಆರಿಲ್ಲ ಮಗುವೆ
ಬಣ್ಣದ ರೇಷಿಮೆ ಉಡುಗೆಯ ತೊಟ್ಟ ಮಾತ್ರಕೆ
ನೀ ನಡೆವ ದಾರಿ ರಾಜಬೀದಿಯಾಗುವುದೇ?
ಬಾಡಿಗೆ ಕುದುರೆಯನೇರುವ ದರ್ದಾದರೂ ನಿನಗೇನಿದೆ?

ಮತಿಭ್ರಮೆಯಾದ ಪ್ರೇತಾತ್ಮಗಳು
ಸೂಟುಬೂಟುಗಳ ಪೋಷಾಕು ಧರಿಸಿ
ಹೊಂಚು ಹಾಕಿ ಕುಂತಿರುವುದು ಕಾಣುತಿಲ್ಲವೇ?

ಎಲ್ಲರ ರಕ್ತ ಕುದಿಯುತ್ತದೆ ನಿಜ
ಆದರೆ, ಎಂದಿನಂತೆ ಹರಿಯುವುದು ನಿನ್ನದೇ ನೆತ್ತರಲ್ಲವೇ?!
ಜಗದಗಲ ಹಾರಾಡಿ, ನೂರಾರು ನದಿಗಳ
ಸಿಹಿ ನೀರು ಕುಡಿದ ನಿನಗೆ
ಶಿಲಾಯುಗದ ಗುಹೆಯೊಳಗೇನು ಕೆಲಸ?

ಅಲ್ಲೇನು ಹಾರ ತುರಾಯಿಗಳ ಭಾಗ್ಯ ನಿನಗಿದೆಯೇ
ಚರಿತ್ರೆಯ ನೀರು ಅಲ್ಲಿ ಹರಿಯುವುದೇ ಇಲ್ಲ!
ಬುಡವಿಲ್ಲದ ಆ ಅಂಧಕಾರದ ಕೂಪದಲಿ
ಕಣ್ಣು ಕುಕ್ಕುವ ಬಾವಲಿಗಳು, ರಕ್ತ ಹೀರುವ ಜಿಗಣೆಗಳು
ಕತ್ತಿ ಮಸೆಯುತ್ತಿರುವುದು ಇನ್ನೂ ತಿಳಿಯಲಿಲ್ಲವೇ?

ನೀನು ನಮ್ಮವನೆನ್ನುವ ನಯವಂಚಕ ಮಾತಿನ
ಋಣದ ಭಾರವ ಇನ್ನೆಷ್ಟು ದಿನ ಹೊರುವೆ?
ನೂರು ಜನುಮಗಳ ಎತ್ತಿ ಬಂದರೂ
ಆ ಎರಡು ಜನುಮದ ಭಾರಕೆ ಸಮನಾಗುವೆಯೇ?

ನೀನು ಶಿಲುಬೆಗೇರುವುದೂ ಇಲ್ಲ,
ನಿನಗೆ ಪುನರುತ್ಥಾನವೂ ಇಲ್ಲ!
ಆಧ್ಯಾತ್ಮದ ಸ್ಥಾವರಗಳ ಪ್ರತಿಧ್ವನಿಗಳು
ನಿನ್ನ ಕಿವಿಗೆ ಬೀಳುವುದೂ ಇಲ್ಲ!
ನೀನು ಅಲ್ಲಿಯೂ ಇಲ್ಲ, ಇಲ್ಲಿಯೂ ಸಲ್ಲ!
ಇದ್ದರೂ ನಿನ್ನ ಇರವಿಗೆ ಮುದ್ರೆಯಿಲ್ಲ!
ಈಗ ಹೇಳು ಮಗುವೇ, ನಿನಗೇಕೆ ಬೇಕು
ಆ ಬಾಡಿಗೆ ಕುದುರೆಯ ಉಸಾಬರಿ?!

ಲೋಹದ ಹಕ್ಕಿಗಳಿಗೇನು ಗರಬಡಿದಿದೆಯೇ!
ಒಮ್ಮೆ ಸವಾರಿ ಮಾಡಿ ನೋಡು
ಸ್ನಿಗ್ಧ ಸೌಂದರ್ಯದ ನೀಲಾಕಾಶದ
ಚಾದರದಲಿ
ಮಿನುಗುತ್ತಲಿರುವ ಚುಕ್ಕಿ ಚಂದ್ರಮ
ಬಹುಶಃ ನಿನ್ನ ಕೆಲಸಕ್ಕೆ ಬರಬಹುದು!

